ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರ: 179/2024
ಸಿಡಬ್ಲ್ಯೂ- 3
ಪಿಡಬ್ಲ್ಯೂ- 2

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾವಲ್ ಹಮಿದ್ |
| ತಂದೆಯ ಹೆಸರು | : | ಮೊಹಿದ್ದೀನ್ ಸಾಹೇಬ್ |
| ಪ್ರಾಯ | : | 73 ವರ್ಷ |
| ಉದ್ಯೋಗ | : | ನಿವೃತ್ತ ಅರಣ್ಯಾಧಿಕಾರಿ |
| ವಾಸ | : | ಸಿದ್ದಾಪುರ |

ದಿನಾಂಕ: **06-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಆರೋಪಿಯ ಪರಿಚಯ ಇರುವುದಿಲ್ಲ. ನಾನು ಚಾಸಾ 1, 2, ಚಾಸಾ 4, 5, ಚಾಸಾ 7 ಒಟ್ಟು 10 ಜನ ಸೇರಿ ಹೀಗೆ 30 ವರ್ಷಗಳ ಹಿಂದೆ ಮಾವಿನಕಾಡು ಎಂಬಲ್ಲಿ ಬೇರೆಯವರ ಬೀಟಿಗೆ ಸಂಬಂಧಿಸಿದ ಕೆಲಸಕ್ಕೆ ಹೋಗಿದ್ದು, ನಾನು ಆಪೀಸರ ಒಟ್ಟಿಗೆ ಇದ್ದು ಕೆಲಸ ಮಾಡಿರುತ್ತೇನೆ. ಅಲ್ಲಿ ಏನು ಸಿಕ್ಕಿರುತ್ತದೆ ಎಂದು ನೆನಪಿರುವುದಿಲ್ಲ. ಈ ಬಗ್ಗೆ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ. ಮರ ಕಡಿದು ದಾಸ್ತಾನು ಇಟ್ಟಿರುತ್ತಾರೆ ಎಂದು ದೂರು ಅರ್ಜಿ ಇದ್ದು ಆ ವಿಚಾರವಾಗಿ ಮಾವಿನಕಾಡಿಗೆ ಹೋಗಿರುತ್ತೇವೆ. ಸಾಕ್ಷಿ ಹೇಳಿಕೆಯನ್ನು ನೋಡಿ ತನ್ನ ಸಹಿ ಗುರುತಿಸಿದ್ದು, ಹೇಳಿಕೆಯನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ಪಂಚಾನಾಮೆ ಆಗಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ಮಾಹಿತಿ ಈಗ ನೆನಪಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ದಿನಾಂಕ 30-08-1993 ರಂದು ರಟ್ಟಾಡಿ ಗ್ರಾಮದ ಮಾವಿನಕಾಡುವಿನ ಚಿತ್ತರಂಜನ್ ರಾವ್ ಮನೆಯಲ್ಲಿ ಕಾಡು ಜಾತಿಯ ಮರಗಳನ್ನು ದಾಸ್ತಾನು ಮಾಡಿರುತ್ತಾರೆ ಎಂದು ದೂರು ಅರ್ಜಿ ಬಂದಿರುತ್ತದೆ ಎಂದರೆ ಸರಿ. ಆ ದೂರು ಅರ್ಜಿಯ ಮೇರೆಗೆ ನಾವೆಲ್ಲರೂ ಒಟ್ಟಿಗೆ ಹೋಗಿದ್ದೇವು ಎಂದರೆ ಸರಿ. ಆರೋಪಿಯ ಮನೆಯ ಆಸುಪಾಸು ಧನದ ಕೊಟ್ಟಿಗೆ ಮತ್ತು ಮನೆಯನ್ನು ನೋಡಲಾಗಿ ಕಾಡು ಜಾತಿ ಮರಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ಆಚಾರಿ ಮಾಡಿದ ಹುಡಿ/ ಕೃತಗಳು ಇದ್ದವು.

ನಾವು ನೋಡಿದಾಗ ಮತ್ತಿ ಮರ, ಗೊದ್ದು ಮರ, ಮಾವು,ಮರ್ವ ಜಾತಿಯ 17 ತುಂಡುಗಳು ಇದ್ದವು ಎಂದರೆ ಸರಿಯಲ್ಲ. ಸಾಕ್ಷಿ ನಾವು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಬೀಟೆ ಮರದ 3 ತುಂಡು ಇದ್ದವು ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಬೀಟೆ ಮರಕ್ಕೆ ಕೆ ಎನ್ ಎಫ್ ಡಿ ಎಫ್ 11 6 ಎಂದು ನಂಬ್ರ ಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ಅದು ನಮ್ಮ ಸೀಲ್ ಅಲ್ಲ ಎಂದು ನುಡಿಯುತ್ತಾರೆ. ಆಚಾರಿ ಕೆಲಸ ಮಾಡಿದ ಹುಡಿ ಅಲ್ಲಿ ಬಿದ್ದಿತ್ತು ಎಂದರೆ ಸರಿ. ಆ 17 ತುಂಡುಗಳಿಗೆ ಕೆ ಎನ್ ಎಫ್ ಡಿ 11 6 ಅಂತ ನಂಬರ್ ಹೊಡೆದಿರುತ್ತಾರೆ ಎಂದರೆ ಸಾಕ್ಷಿ ಬಾಕೋಡಿ ಬಿಟ್ ಗಾರ್ಡ್ ನವರು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಅವರ ಮನೆಯ ಕಿಟಿಕಿ ಬಾಗಿಲು ಯಾವ ಮರದಿಂದ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅವರ ಮರದ ಬಾಗಿಲು ಬೀಟೆ ಮರದಿಂದ ಮಾಡಿದ್ದು, ಆ ಬಾಗಿಲಿಗೆ ಸೀಲನ್ನು ಮಾಡಿ ನಂಬರ್ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ 17 ತುಂಡುಗಳು ಹಾಗೂ 3 ಬೀಟೆ ಜಾತಿಯ ಮರಗಳನ್ನು ಸ್ವಾಧಿನ ಪಡಿಸಿರುತ್ತಾರೆ ಎಂದರೆ ಸಾಕ್ಷಿ ಮಹಜರು ಮಾಡಿದ್ದು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು, ಚಾಸಾ 1 ಮತ್ತು 2 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಆ ಬೀಟೆ ಮರದ ಬಾಗಿಲು ಹಾಗೂ ಕಿಟಕಿಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ತಕ್ಷೀರು ನಡೆದು 30 ವರ್ಷ ಆಗಿದ್ದರಿಂದ ಮಹಜರು ಮಾಹಿತಿ ಹೇಳಲು ತೊಂದರೆ ಆಗುತ್ತಿದೆ ಎಂದರೆ ಸಾಕ್ಷಿ ನೆನಪಿನ ಶಕ್ತಿ ಕಡಿಮೆ ಇದೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರವಾಗಿ,ಶ್ರೀ ಎನ್ ಆರ್ ವಕೀಲರಿಂದಃ</u>

1. ತಕ್ಷೀರು ಸ್ಥಳಕ್ಕೆ ಬನ್ನಿ ಅಂತ ನನಗೆ ಚಾಸಾ 1 ರವರು ತಿಳಿಸಿರುತ್ತಾರೆ. ತಕ್ಷೀರು ಸ್ಥಳಕ್ಕೆ ಜೀಪಿನಲ್ಲಿ ಹೋಗಿರುತ್ತೇವೆ. ಯಾದಸ್ತು ನಿ.ಪಿ.3 ರಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿ ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ. 3 ರಲ್ಲಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ತಕ್ಷೀರು ಸ್ಥಳವನ್ನು ನಾನು ಪ್ರಥಮವಾಗಿ ನೋಡಿದ್ದು. ಅದು ಸರ್ಕಾರಿ ಜಾಗವಾಗಿದ್ದು ಕಾಡು ಆಗಿದ್ದರಿಂದ ಯಾವ ವ್ಯಕ್ತಿ ನಿಂತದ್ದು ಕಾಣುವುದಿಲ್ಲ ಎಂದರೆ ಸರಿ. ನನ್ನ

ಸಮಕ್ಷಮ ಯಾವುದೇ ಮರುಗಳನ್ನು ವಶ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ತಕ್ಷೀರು ಸ್ಥಳಕ್ಕೆ ಒಂದೇ ಬಾರಿಗೆ ಹೋಗಿರುತ್ತೇನೆ. ಒಂದು ಬಾರಿ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ. ದಿನಾಂಕ 09-09-1993 ರಂದು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದನ್ನು ಹೊರತು ಪಡಿಸಿ ಇಲ್ಲಿಯವರೆಗೆ ಯಾವುದೇ ಹೇಳಿಕೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ.

2. ನನಗೆ ಅಧಿಕಾರಿಗಳು ಕರೆದರೂ ಎಂದು ಸಹಿ ಮಾಡಿದ್ದು ಬಿಟ್ಟರೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದು ಸಾಕ್ಷಿಗೆ ಅಂತ ನನ್ನ ಸಹಿ ಪಡೆದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ